# ಮೊಗಳ್ಳಿ ಗಣೇಶ್



ಮೊಗಳ್ಳಿ ಗಣೇಶ್ ಹುಟ್ಟಿದ್ದು ಚನ್ನಪಟ್ಟಣ ತಾಲ್ಲೂಕಿನ ಸಂತೆಮೊಗೇನಹಳ್ಳಿಯಲ್ಲಿ. ಹಳ್ಳಿಯಲ್ಲಿ ಕಳೆದ ಬಾಲ್ಯದ ಅನುಭವ, ಮುಂದೆ ಪ್ರಜ್ಞೆಗೆ ದಕ್ಕಿದ ಲೋಕದ ರೀತಿನೀತಿ, ಆಮೇಲೆ ವ್ಯವಹಾರ ಲೋಕ ನೀಡಿದ ಸಿಹಿಕಹಿ ಎಲ್ಲವನ್ನೂ ತಮ್ಮ ಕತೆಗಳಲ್ಲಿ ಅದ್ಭುತವಾಗಿ ನಿರೂಪಿಸುವ ಗಣೇಶ್, ಕನ್ನಡ ಕಥನ ಪರಂಪರೆಗೆ ಹೊಸತನ ನೀಡಲು ಪ್ರಯತ್ನಿಸಿ ಯಶಸ್ವಿಯಾದ ಕಥೆಗಾರ. ಕಾವ್ಯ, ವಿಮರ್ಶೆ, ಜಾನಪದ ಕ್ಷೇತ್ರಗಳಲ್ಲೂ ಅವರು ಕೆಲಸ ಮಾಡಿದ್ದಾರೆ. ಪ್ರಸ್ತುತ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು.

ಪ್ರಕಟಿತ ಕಥಾಸಂಗ್ರಹಗಳು: 'ಬುಗುರಿ', 'ಮಣ್ಣು', 'ಅತ್ತೆ', 'ಭೂಮಿ', 'ಕನ್ನೆಮಳೆ', 'ಮೊಗಳ್ಳಿ ಕಥೆಗಳು' (ಆವರೆಗಿನ ಬಹುಪಾಲು ಕಥೆಗಳ ಸಂಕಲನ), 'ದೇವರ ದಾರಿ'. 'ಪ್ರಜಾವಾಣಿ' ದೀಪಾವಳಿ ಕಥಾಸ್ಪರ್ಧೆಯಲ್ಲಿ ಅವರ ಕತೆಗಳು ನಾಲ್ಕು ಬಾರಿ ('ಒಂದು ಹಳೆಯ ಚಡ್ಡಿ', 'ಬುಗುರಿ', 'ಬತ್ತ', 'ತೋಪು') ಬಹುಮಾನ ಪಡೆದಿವೆ.

★★★

ಲೈಲಾಗೆ ತಾನೆಂದೂ ಮುಟ್ಟಿರಲಿಲ್ಲ, ಕನಿಷ್ಠ ಒಂದಾದರೂ ಸರಸದ ಶಬ್ದವನ್ನು ಅವಳೊಡನೆ ಹೇಳಿರಲಿಲ್ಲ. ಸುಮ್ಮನೆ ಬರುವ ಸುಂದರ ನೆನಪುಗಳ ಹಾಗೆ ಅವಳನ್ನು ನನ್ನೊಳಗೆ ಬಚ್ಚಿಟ್ಟುಕೊಂಡಿದ್ದೆ. ಅವಳ ಹೆಸರನ್ನು ಹಲವಾರು ಬಾರಿ ಲಯಬದ್ಧ ಭಿನ್ನ ಭಿನ್ನ ಸ್ವರಗಳಲ್ಲಿ ಲೈಲಾ ಲೈಲಾ ಎಂದು ಹೇಳಿಕೊಂಡಿದ್ದೆ. ಅವಳ ಎದಿರು ಎಂದೂ ಏನನ್ನೂ ಹೇಳದೆ ತೋರದೆ ಹಾಗೇ ಕರಗಿಹೋಗಿದ್ದೆ. ಇಲ್ಲಾ ಕರಗುವ ಬದಲು ಮುರುಟಿಹೋಗಿದ್ದೆ. ಎನ್ನುತ್ತಾ ಛೇ, ಇದೆಲ್ಲಾ ಯಾಕೆ ನೆನಪಾಗುತ್ತದೆ ಎಂದು ನಿಂತ ಇವಳೆದುರು ಬೇರೆ ಮಾತಾಡಲು ತೊಡಗಿದೆ. 'ಅಲ್ಲಿ ಕೂರೋಣ' ಎಂದು ಕೈ ತೋರಿದಳು. ಅಲ್ಲಿ ಹಸಿರು ಹಾಸಿನ ಹುಲ್ಲಿನ ದಳಗಳ ಮೇಲೆ ಕುಳಿತರು. ಇವಳನ್ನೂ ಕೂಡ ತಾನೀವರೆಗೆ ಕೊಂಚ ಬೆರಳಿಂದಲೂ ಸೋಕಿಸಿಲ್ಲ. ಆದರೆ ಮನಸ್ಸಿನ ಆಳ ಪಾತಾಳಕ್ಕೆ ಎಷ್ಟೊಂದು ಗಟ್ಟಿಯಾಗಿ ಎಳೆದುಕೊಂಡಿರುವೆನಲ್ಲಾ ಎನಿಸಿ, ಇಷ್ಟೊಂದು ಚೆಂದಚೆಂದದ ಹುಡುಗೀರು ಪಕ್ಕಪಕ್ಕದಲ್ಲೇ ಸೋಕಿಕೊಂಡು ಹೋಗುವಂತಿದ್ದರೂ ನಾನು ಅವರ ಮುಟ್ಟಲಾರೆ, ಮಾತನಾಡಿಸಲಾರೆ, ಹತ್ತಿರ ಹೋಗಲಾರೆ, ಕರೆಯಲಾರೆ, ಅವರ ತುಟಿಗಳೋ ಕೆನ್ನೆಗಳೋ ಕುಣಿವ ಹಾಗೆ ಏನನ್ನೂ ಮಾಡಲಾರೆ, ಇಷ್ಟೊಂದು ಹತ್ತಿರದ ಸುಖ ಎಷ್ಟೊಂದು ದೂರ ಇದೆಯಲ್ಲಾ ಎನ್ನುತ್ತಾ, 'ಒಟ್ಟಿನಲ್ಲಿ ಇಲ್ಲಿ ಸುಖಾ ಅನ್ನೋದು ವಿಷಾದವನ್ನೇ ಉಂಟುಮಾಡೋದೆ ಆಗಿದೆ ಅಲ್ಲವಾ...' ಎಂದು ಕೇಳಿದ. 'ನನಗಷ್ಟೆಲ್ಲಾ ಗೊತ್ತಾಗೊಲ್ಲ, ಸರಳವಾಗಿ ಮನುಷ್ಯ ಎಂಥದೇ ಸ್ಥಿತಿಯಲ್ಲೂ ಬದುಕಬಲ್ಲ ಎಂದಷ್ಟೇ ತಿಳಿದಿರೋದು. ನೀವು ಯಾವಾಗ ಹೆಚ್ಚು ಸಂಕೀರ್ಣ ಸೂಕ್ಷ್ಮ ಆಗ್ತಾ ಹೋಗ್ತಿರೋ ಆಗ ಜನರಿಂದ ಅಷ್ಟಷ್ಟು ದೂರ ದೂರ ಆಚೆ ಹೊರಟುಹೋಗ್ತೀರಿ. ನನಗೆ ನಿಮ್ಮ ಹಾಗೆ ಇರೋದು ಇಷ್ಟವಿಲ್ಲ' ಎಂದುಬಿಟ್ಟಳು. ಆ ಕ್ಷಣಕ್ಕೆ ಅವನ ಬಗ್ಗೆ ಅವನಿಗೇ ಅನುಮಾನ ಬಂದು, ಹೆಣ್ಣಿನಲ್ಲಿ ತಾನು ಕಾಮ, ಪ್ರೇಮ, ಪ್ರೀತಿ ಈ